ತಪಸ್ವೀ ಸಾಧುಗಳು ತಪಸ್ಸನ್ನು ಆಚರಿಸಿದಂತೆ ತೋರುತ್ತದೆ. ದೇವಾಲಯದಲ್ಲಿ ಪೂಜೆ-ಪ್ರಾರ್ಥನೆಗಳನ್ನು ಸಲ್ಲಿಸಿ, ಸಮೀಪದಲ್ಲಿದ್ದ ಒಂದು ಮನೆಯ ಕಡೆಗೆ ಸಾಗಿದೆ. ಆ ಮನೆಯಲ್ಲಿ ಒಂದು ವಿಶಾಲವಾದ ಕೊಠಡಿ ಇತ್ತು. ಅಲ್ಲಿ ಸಾಧಾರಣ ಮನೆಗೆ ಅಗತ್ಯವಾಗುವ ವಿವಿಧ ವಸ್ತುಗಳನ್ನು ಬೇರೆ ಬೇರೆ ಮೂಲೆಗಳಲ್ಲಿ ಇರಿಸಲಾಗಿತ್ತು. ಮನೆಯ ಮಧ್ಯಭಾಗದಲ್ಲಿ ಒಲೆಯ ಮುಂದೆ ಕುಳಿತು, ತನ್ನ ಕಂದನನ್ನು ಮಡಿಲಲ್ಲಿಟ್ಟುಕೊಂಡು ಹೆಂಗಸೊಬ್ಬಳು ಅಡುಗೆ ಮಾಡುವುದರಲ್ಲಿ ನಿರತಳಾಗಿದ್ದಳು. ಮಣೆ, ಲಟ್ಟಣಿಗೆ ಏನೂ ಇಲ್ಲದೆ ಕಲಸಿದ ಹಿಟ್ಟನ್ನು ಎರಡೂ ಕೈಯಲ್ಲಿ ಬಡಿಯುತ್ತಲೇ ಆಕೆ ರೊಟ್ಟಿ ಮಾಡುತ್ತಿದ್ದಳು. ಅದನ್ನು ಕಾವಲಿಯ ಮೇಲೆ ಹಾಕುತ್ತಿದ್ದಂತೆ ಅದು ಚೆನ್ನಾಗಿ ಉಬ್ಬುತ್ತಿತ್ತು. ಬಿಸಿ ಬಿಸಿ ರೊಟ್ಟಿಗಳನ್ನು ತರಕಾರಿ ಹಾಕಿ ಮಾಡಿದ ಒಂದು ರೀತಿಯ ವ್ಯಂಜನದೊಂದಿಗೆ ತಟ್ಟೆಗೆ ಹಾಕಿ, 'ಬಾಬಾ, ಲೋ' ಎಂದು ಹಿಂದಿಯಲ್ಲಿ ಹೇಳುತ್ತಾ ಆಕೆ ನನಗೆ ಕೊಟ್ಟಳು.

ಆಕೆಯಿಂದ ಭಿಕ್ಷೆಯನ್ನು ಸ್ವೀಕರಿಸಿದ ನಂತರ ಆಕೆಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಪ್ರಯಾಣ ಮುಂದುವರೆಸಿ, ಬೆಟ್ಟ ಏರುತ್ತಾ ಸಾಗಿದೆ. ಒಂದು ಸಾಗುವಳಿ ಮಾಡಿದ ಕ್ಷೇತ್ರದಿಂದ ಮತ್ತೊಂದು ಸಾಗುವಳಿ ಮಾಡಿದ ಕ್ಷೇತ್ರದ ಕಡೆಗೆ ಸಾಗುತ್ತಾ, ಹತ್ತುತ್ತಾ ಇಳಿಯುತ್ತಾ ನಾನು ಎತ್ತರಕ್ಕೆ ಏರತೊಡಗಿದೆ.

ಆ ಕಾಲದಲ್ಲಿ ಎಲ್ಲೋ ಕೆಲವು ಯಾತ್ರಿಗಳು ಮಾತ್ರ ಕೈಲಾಸ ಪರ್ವತಕ್ಕೆ ಹೋಗುತ್ತಿದ್ದರು. ಟಿಬೆಟ್ಟಿನ ಕಡೆಗೆ ಹೋಗಬೇಕಾದ ದಾರಿ ತಿಳಿಯದೆ ನಾನೊಬ್ಬನೇ ಯಾತ್ರಿಕ ಸಾಗುತ್ತಿದ್ದೆ. ಇಂತಹ ಸಂದರ್ಭ ಒದಗಿದಾಗ ಕುರಿಮಂದೆಯೊಡಗೂಡಿದ ಕುರುಬರನ್ನು ಹಿಂಬಾಲಿಸಿ ಸಾಗಬೇಕೆಂದು ನನಗೆ ಸಲಹೆಯಿತ್ತು. ಈ ಕುರುಬರು ಭಾರತ ಮತ್ತು ಟಿಬೆಟ್ ದೇಶದ ಸರಹದ್ದಿನ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಎತ್ತರೆತ್ತರದ ಪರ್ವತಶಿಖರಗಳನ್ನೂ ಲೀಲಾಜಾಲವಾಗಿ ಹತ್ತಿಬಿಡುತ್ತಿದ್ದರು. ಎಲ್ಲಾ ವಿಧವಾದ ಅಸಾಧಾರಣ ಪ್ರಕೃತಿ ವಿಕೋಪಗಳನ್ನು ಎದುರಿಸಬಲ್ಲ ಎದೆಗಾರಿಕೆಯುಳ್ಳವರು ಇವರು. ಕುರಿ, ಮೇಕೆ, ಹೇಸರುಗತ್ತೆ, ಯಾಕ್, ಕುದುರೆ ಮೊದಲಾದ ಪ್ರಾಣಿಗಳ ಸಾಕಣೆಯೇ ಇಲ್ಲಿನ ಪ್ರಮುಖ ಕಸುಬು. ಅಕ್ಕಿ ಬೇಳೆ ಉಪ್ಪು ಮೊದಲಾದ ಗೃಹೋಪಯೋಗಿ ಪದಾರ್ಥಗಳ ಹೊರೆಯನ್ನು ಹೊರಲು ಈ ಪ್ರಾಣಿಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಮಣಿ, ಮುತ್ತು, ಬಳೆ, ಸರ ಮೊದಲಾದ ಸ್ತ್ರೀಯರು ಆಭರಣವಾಗಿ ಉಪಯೋಗಿಸುವ ಪದಾರ್ಥಗಳ ವ್ಯಾಪಾರ ಇವರ ಉಪಕಸುಬು. ಇಂತಹ ಆಭರಣಗಳು ಟಿಬೆಟ್ ದೇಶದಲ್ಲಿ ದೊರೆಯುವುದಿಲ್ಲ. ಸೆಣಬಿನ ಚೀಲಗಳಲ್ಲಿ ಈ ವಸ್ತುಗಳನ್ನು ಕಟ್ಟಿ, ಈ ಪ್ರಾಣಿಗಳ ಮೇಲೆ ಹೊರೆ ಹೇರಿ ಅಲ್ಲಿ ವ್ಯಾಪಾರಕ್ಕಾಗಿ ಒಯ್ಯುತ್ತಿದ್ದರು. ಅಲ್ಲಿಂದ, ಉಲ್ಲನ್ ಪದಾರ್ಥಗಳನ್ನು ತಯಾರು ಮಾಡುವ ಉತ್ತರ ಭಾರತದ ಉಲ್ಲನ್ ಮಿಲ್‌ಗಳಿಗೆ, ಕಚ್ಚಾ ಉಲ್ಲನ್‌ಗಳನ್ನು ಪೂರೈಸಲು ಕುದುರೆ, ಹೇಸರಗತ್ತೆಗಳ ಮೇಲೆ ಉಲ್ಲನ್ ಹೊರೆಯನ್ನು ಕಟ್ಟಿಕೊಂಡು ಬರುತ್ತಿದ್ದರು.

ಇಂತಹ ವ್ಯಾಪಾರಿಗಳ ಗುಂಪೊಂದನ್ನು ಸೇರಿಕೊಂಡೆ. ಅವರದೇ ಬಿಡಾರಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆ. ಅವರ ಬಿಡಾರದ ಒಂದು ಮೂಲೆಯಲ್ಲಿ ನನಗೆ ವಿಶ್ರಮಿಸಲು ಅವಕಾಶ ಕೊಡುತ್ತಿದ್ದರು. ಅವರು ತಮ್ಮ ಬಳಿಯಿದ್ದ ಮುದಿಯಾದ ಅಥವಾ ದುರ್ಬಲವಾದ ಕುರಿಯನ್ನೋ, ಮೇಕೆಯನ್ನೋ ಕೊಂದು ಅದರ ಮಾಂಸವನ್ನು ಊಟಮಾಡುತ್ತಿದ್ದರು. ನಾನು ನನ್ನ ಬಳಿಯಿದ್ದ ಚಟ್ಟುವಿಗೆ ಉಪ್ಪು ನೀರು ಬೆರೆಸಿ ಊಟ ಮಾಡುತ್ತಿದ್ದೆ. ಅವರು ಪ್ರಾಣಿ ಹತ್ಯೆ ಮಾಡುವಾಗ ನನ್ನನ್ನು ದೂರ ಹೋಗಲು ಹೇಳುತ್ತಿದ್ದರು.

ಹೀಗೆ ಎತ್ತರ ಎತ್ತರಕ್ಕೆ ಏರುತ್ತಾ ಏರುತ್ತಾ ಭಾರತೀಯ ಪೋಲೀಸ್ ಚೆಕ್‌ಪೋಸ್ಟ್ ಬಳಿಗೆ ಬಂದೆವು. ಚೆಕ್‌ಪೋಸ್ಟ್ ಹತ್ತಿರದ ದಾರಿ ತುಂಬಾ ಕಡಿದಾಗಿತ್ತು. ಕುದುರೆಗಳು ಯಾಕ್‌ಗಳೂ ಕೂಡ ಅಲ್ಲಿ ಮೇಲುಬ್ಬಸ ಪಡುತ್ತಿದ್ದವು. ಭಾರತ ಸರ್ಕಾರದ ಅನುಮತಿಯಿಲ್ಲದೆ ಯಾರೂ ಟಿಬೆಟ್ಟನ್ನು ಪ್ರವೇಶಿಸುವಂತಿರಲಿಲ್ಲ. ಪೋಲೀಸರು ಅನುಮತಿ ಪತ್ರ ಕೇಳಿದರು. ನಾನು ಕೈಲಾಸ-ಮಾನಸ ಸರೋವರದ ಯಾತ್ರಿಕನೆಂದು ಹೇಳಿದೆ. ಕೇವಲ ೩೫ ವಯಸ್ಸಿನ ಯುವ ಸಂನ್ಯಾಸಿ ಆಗಿದ್ದುದರಿಂದ, ಕಮ್ಯುನಿಸ್ಟ್ ಆದ ನಾನು ಸನ್ಯಾಸಿ ವೇಷದಿಂದ ಭಾರತದಿಂದ ತಪ್ಪಿಸಿಕೊಂಡು ಕಮ್ಯುನಿಸ್ಟ್ ವಿಚಾರಗಳ ಕುರಿತು ಶಿಕ್ಷಣ ಪಡೆಯಲು, ಚೀನಾ ದೇಶಕ್ಕೆ ಹೋಗುತ್ತಿರುವೆನೆಂದು ನನ್ನ ಮೇಲೆ ಸಂಶಯಪಟ್ಟರು. ನಾನು ನನ್ನ ಹೆಸರನ್ನು ಹೇಳಿ ರಾಮಕೃಷ್ಣ ಮಿಷನ್ನಿಗೆ ಸೇರಿದವನೆಂದೂ, ಈಗ ಪ್ರಸ್ತುತ ವೃಂದಾವನದ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವೆನೆಂದೂ ವಿವರವಾಗಿ ತಿಳಿಸಿ, ನನಗೆ ಕೊಟ್ಟಿದ್ದ ಪತ್ರವೊಂದನ್ನು ತೋರಿಸಿದೆ.

ನಾನು ಹೇಳಿದ ವಿಚಾರಗಳೆಲ್ಲ ಸತ್ಯವೆಂದು ಮನವರಿಕೆಯಾದ ಮೇಲೆ ನನ್ನನ್ನು ಆ ಕಣಿವೆ ದಾಟಿ ಸಾಗಲು ಅನುಮತಿ ಕೊಟ್ಟರು. ಮತ್ತು ನನಗೆ ಈ ನೀತಿ ಕಣಿವೆಯ ಮೂಲಕವಾಗಿಯೇ ಹಿಂತಿರುಗಿ ಬರಬೇಕೆಂದು ಆದೇಶಿಸಿದರು. ಆದರೆ ಪರಿಸ್ಥಿತಿಗಳು ಬೇರೆಯೇ ಆದವು. ನಾನು ಭಾರತಕ್ಕೆ ಹಿಂತಿರುಗಬೇಕಾದಾಗ ಬೇರೆಯೇ ಮಾರ್ಗವನ್ನು ಅನುಸರಿಸಬೇಕಾಯಿತು; 'ಹೋತಿ ಕಣಿವೆ'ಯ ಮೂಲಕ ಹಿಂತಿರುಗುವಂತಾಯಿತು. ನನ್ನ ಕುರುಬ ಸಂಗಾತಿಗಳೊಡನೆ ನಾನು ಟಿಬೆಟ್ ದೇಶದ ಸರಹದ್ದನ್ನು ದಾಟಿ, ಆ ದೇಶವನ್ನು ಪ್ರವೇಶಿಸಿದೆ.

*(ಮುಂದುವರಿಯುವುದು)*

**ದೇವರು ಪ್ರಹ್ಲಾದನ ಪ್ರಾರ್ಥನೆಗೆ ಸಂತುಷ್ಟನಾಗಿ, ''ಏನು ವರ ಬೇಕು, ಕೇಳು'' ಎಂದನು. ಅದಕ್ಕೆ ಪ್ರಹ್ಲಾದ, ''ದೇವರೆ, ಯಾರು ನನಗೆ ತೊಂದರೆ ಕೊಟ್ಟರೊ ಅವರನ್ನು ಕ್ಷಮಿಸು. ಅವರನ್ನು ಶಿಕ್ಷಿಸುವುದರಿಂದ ನೀನೆ ಶಿಕ್ಷಿಸಿಕೊಳ್ಳುವೆ. ಏಕೆಂದರೆ ಚರಾಚರ ವಸ್ತುಗಳಲ್ಲೆಲ್ಲಾ ನೀನೇ ಇರುವೆ'' ಎಂದನು.**

*('ಶ್ರೀ ಗುರುದೇವರ ವಚನ' ದಲ್ಲಿ ಶ್ರೀ ರಾಮಕೃಷ್ಣರು)*